**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

ಅಸಲು ದಾವೆ ಸಂಖ್ಯೆ.213/2021

ಪಿ.ಡಬ್ಲ್ಯೂ.03

**<u>ಸಾಕ್ಷಿಗೆ ಇಂದು ದಿನಾಂಕ ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರವಾಗಿಶ್ರೀ. ಪಿ ಎಮ ವಿ  ವಕೀಲರಿಂದ</u>**

ನಾನು ಖಾಯಂ ಆಗಿ ಮುಧೋಳ ಪಟ್ಟಣದಲ್ಲಿ ವಾಸವಾಗಿದ್ದೆನೆ ಎಂದರೆ ಸರಿ. ನನ್ನ ಮಾಲಿಕತ್ವದ ಜಮೀನು ಸೊರಗಾಂವ ಗ್ರಾಮದಲ್ಲಿ ಇರುವುದರಿಂದ ಆ ಕಾರಣಕ್ಕಾಗಿ ನನ್ನ ಸಾಕ್ಷಿಃಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆ ರೀತಿ ಬರೆಸಿರುತ್ತೇನೆ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸರ್ವೆ ನಂ.153/3 ವಿ 2ಎ-2ಗುಂ ಜಮೀನು ನನ್ನದ್ದು ಇರುವುದು.  ಈ ಜಮೀನಿನ ಮಾಲೀಕ ನಾನು ಅಂತಾ ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ವಾದಿ ಈ ದಾವೆಯನ್ನು ಒಟ್ಟು 2ಎ 2 ಗುಂ ಜಮೀನಿಗೆ ಸಂಬಂಧಪಟ್ಟಂತೆ ಈ ದಾವೆ ದಾಖಲು ಮಾಡಿರುತ್ತಾರೆ. ಸರ್ವೆ ನಂ.153/12 ಹಾಗೂ 154 ಹಿಸ್ಸಾ 12 ಅಥವಾ 13 ಇರಬಹುದು ಇದರ ವಿಸ್ತಿರ್ಣ 7 ಗುಂಟೆ ಇರವುದು. ಈ ಜಮೀನಿಗೆ ಸಂಬಂಧಪಟ್ಟಂತೆ ಈ ದಾವೆ ದಾಖಲು ಮಾಡಿರುತ್ತಾರೆ. ಈ ಎರಡು ಜಮೀನುಗಳಿಗೆ  ಹೊಂದಿಕೊಂಡು ನನ್ನ ಮಾಲಿಕತ್ವದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ತಂದೆ ಮಾನಿಂಗಪ್ಪ ಈಗ ಮೃತ ಪಟ್ಟು ಸುಮಾರು 10 ವರ್ಷ ಆಗಿರಬಹುದು. ಈತನಿಗೆ ಮೂಲತಃ ಪೂರ್ವಜರು ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ.  ಪ್ರತಿವಾದಿ 1 ಮತ್ತು ಆತನ ತಂದೆಯ ಮಧ್ಯೆ ಸಂಬಂಧ ಚೆನ್ನಾಗಿ ಇರಲಿಲ್ಲ  ಇವರು ಪ್ರತ್ಯೇಕವಾಗಿ ವಾಸವಾಗಿದ್ದಿರು ಎಂದರೆ ಸರಿಯಲ್ಲ. ಇವರು ಕೂಡಿಯೇ ವಾಸ ವಾಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ. 1982 ರಿಂದ ಈ ಜಮೀನು ಮಂಜೂರು ಆದ್ದಾಗಿನಿಂದಲೂ ಅವರು ಕೂಡಿಯೇ ವಾಸವಾಗಿದ್ದರು. 1982ರಲ್ಲಿ ಆದೇಶ ಪ್ರತಿವಾದಿ 1 ರವರ ಹೆಸರಿನಲ್ಲಿ ಆಗಿರುವುದು.  ಪ್ರತಿವಾದಿ 1 ರವರಿಗೆ ಯಾವುದೇ ಜಮೀನು

ಇರಲಿಲ್ಲ ಎಂದರೆ ಸರಿ. ಪ್ರತಿವಾದಿ 1 ಭೂಮಿಯನ್ನು ಹೊಂದದೇ ಇರುವುದರಿಂದ ಆ ಕಾರಣಕ್ಕಾಗಿ ಸರಕಾರದವರು ಈ ಜಮೀನು ಆತನ ಹೆಸರಿನಲ್ಲಿ ಮಂಜೂರು ಮಾಡಿರುವರು ಎಂದರೆ ಸರಿ. ದಿನಾಂಕ 18-04-1984 ರಂದು ಕಂದಾಯ ವೃತ್ತ ನೀರಿಕ್ಷಕ ಮುಧೋಳ ಇವರು ದಾವಾ ಜಮೀನನ್ನು ಪ್ರತಿವಾದಿ 1 ರವರಿಗೆ ಕಬ್ಜಾ ಕೊಟ್ಟ ಬಗ್ಗೆ ಪಾವತಿ ನೀಡಿರುತ್ತಾರೆ ಎಂದರೆ ಸರಿ. ಅಂದಿನಿಂದ ದಾವಾ ಜಮೀನಿಗೆ ಪ್ರತಿವಾದಿ 1 ರವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲು ಆಗಿರುವುದು ಎಂದರೆ ಸಾಕ್ಷಿ ಉತ್ತರಿಸುವುದೆನೆಂದರೆ ಪ್ರತಿವಾದಿ 1 ಕುಟುಂಬದ ಹಿರಿಯ ಮಗನಾಗಿರುವುದರಿಂದ ಆತನ ಹೆಸರಿನಲ್ಲಿ ಹೆಸರು ದಾಖಲು ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ ಜಮೀನು ಪ್ರತಿವಾದಿ 1 ರವರಿಗೆ ಕಬ್ಜಾ ಕೊಟ್ಟು ರಶೀದಿ ನೀಡಿರುವುದರಿಂದ ಆ ಕಾರಣಕ್ಕಾಗಿ ಆತನ ಹೆಸರಿನಲ್ಲಿ ಪಹಣಿ ಪತ್ರಿಕೆಯಲ್ಲಿ ಹೆಸರು ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಮೇಲೆ ಪ್ರತಿವಾದಿ 1 ಬೇರೆ ಬೇರೆ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿರುವನ್ನು ಎಂದರೆ ವಾದಿಯ ಈ ಸಾಲವನ್ನು ಪ್ರತಿವಾದಿ 1 ರವರ ಹೆಸರಿನಲ್ಲಿ ಪಡೆದು ಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ಸಾಲ ವಾದಿ ಪಡೆದು ಕೊಂಡ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಯಾರ ಹೆಸರಿನಲ್ಲಿ ಆಸ್ತಿ ಇರುವುದು ಅವರಿಗೆ ಸಾಲ ನೀಡುತ್ತಾರೆ ಎಂದರೆ ಸರಿ. ನಾನು ಕಳೆದ 25 ವರ್ಷಗಳಿಂದಲೂ ನನ್ನ ಜಮೀನು ಇದ್ದ ಊರಿಗೆ ಹೊಗಿರುವುದಿಲ್ಲ, ಖಾಯಂ ಆಗಿ ಮುಧೋಳದಲ್ಲಿ ವಾಸವಾಗಿದ್ದು ಮತ್ತು ಒಕ್ಕಲುತನವನ್ನು ಮಾಡಿರುವುದಿಲ್ಲ. ದಾವಾ ಜಮೀನುಗಳಲ್ಲಿ ಬೆಳೆದಿರುವ ಕಬ್ಬನ್ನು ಪ್ರತಿವಾದಿ 1 ರವರ ಹೆಸರಿನಲ್ಲಿ ಕಳುಹಿಸಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನುಡಿಯುವುದ್ದೆನೆಂದರೆ ಜಮೀನು ಯಾರ ಹೆಸರಿನಲ್ಲಿ ಇರುತ್ತದೆಯೋ ಅವರೇ ಕಳುಹಿಸಿ ಕೊಡಬೇಕಾಗುತ್ತದೆ ಎಂದು ಹೇಳುತ್ತಾರೆ. ವಾದಿಯು ಯಾವುದೇ ಕಾಲಕ್ಕೂ ದಾವಾ ಜಮೀನಿನ ಕಬ್ಜಾ ವಹಿವಾಟನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬಾವಿಯನ್ನು ವಾದಿಯೇ ತೆಗೆಸಿರುತ್ತಾರೆ ಹಾಗೂ ವಿದ್ಯುತ ಸಂರ್ಪಕವನ್ನು ವಾದಿಯೇ

ತೆರೆಸಿರುತ್ತಾರೆ. ನನಗೆ ವಾದಿಯ ಮನೆತನದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರೂ ಸಹಿತ ವಾದಿಯ ಕಡೆಯಿಂದ ನಾನು ದುಡ್ಡು ಪಡದುಕೊಂಡು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ